



## ಸಮಯ ಪ್ರಜ್ಞೆ

ಬ್ಯಾಂಕ್ ದರೋಡೆಗೈದ ಬಳಿಕ ಸನಿಹವಿದ್ದ ಗುಮಾಸ್ತನನ್ನು ದರೋಡೆಕೋರ ಕೇಳಿದ; 'ನಾನು ದರೋಡೆ ಮಾಡಿದ್ದನ್ನು ನೀನು ನೋಡಿದೆಯಾ?' ಆತ ಹೌದೆಂದಾಗ ದರೋಡೆಕೋರ ಆತನ ಮೇಲೆ ಗುಂಡು ಹಾರಿಸಿದ. ಆನಂತರ ಪಕ್ಕದಲ್ಲೇ ನಿಂತಿದ್ದ ಗೋಪಿಯನ್ನು ಕೇಳಿದ 'ನೀನು ನೋಡಿದೆಯಾ?' ತಕ್ಷಣ ಗೋಪಿ 'ನಾನು ನೋಡಿಲ್ಲ, ನನ್ನ ಪತ್ನಿ ನೋಡಿದ್ದಾಳೆ' ಎಂದು ಪತ್ನಿಯತ್ತ ಕೈ ತೋರಿಸಿದ!

★★★

## ಪರಿಹಾರೋಪಾಯ

ಸಂತಾ: ನಿನಗೆ ಸೆಖೆಯಾದರೆ ಏನು ಮಾಡುವೆ?
ಬಂತಾ: ಕೂಲರ್ ಎದುರು ಕೂರುತ್ತೇನೆ.
ಸಂತಾ: ಆಗಲೂ ಸೆಖೆಯಾದರೆ..?
ಬಂತಾ: ಕೂಲರ್ 'ಆನ್' ಮಾಡುತ್ತೇನೆ!

★★★

## ಪರಿಣಾಮ

ತುಂಟ ಹುಡುಗನೋರ್ವ ತನ್ನ ತಾಯಿಯೆದುರು ಸೈಕಲ್ ಚಲಾಯಿಸುತ್ತಾ, 'ನೋಡು ಮಮ್ಮಿ, ನಾನು ಒಂದು ಕೈ ಬಿಟ್ಟು ಸೈಕಲ್ ಸವಾರಿ ಮಾಡುತ್ತಿದ್ದೇನೆ' ಎಂದ. ಸ್ವಲ್ಪ ಸಮಯದ ನಂತರ ಪುನಃ ಬಂದು, 'ನಾನೀಗ ಎರಡೂ ಕೈಗಳನ್ನು ಬಿಟ್ಟು ಸೈಕಲ್ ಚಲಾಯಿಸುತ್ತಿದ್ದೇನೆ' ಎಂದ. ಕೆಲವು ನಿಮಿಷಗಳ ನಂತರ ಮರಳಿ ಅಲ್ಲಿಂದ ಹಾದು ಹೋಗುತ್ತಾ, 'ಮಮ್ಮಿ ನಾನೀಗ ಎದುರಿನ ಎರಡು ಹಲ್ಲುಗಳಿಲ್ಲದೆಯೇ ಸೈಕಲ್ ಚಲಾಯಿಸುತ್ತಿದ್ದೇನೆ ಎಂದ'!

★★★

## ಏಕ ಮಾತ್ರ




ಹುಡುಗಿ: ನಿಮ್ಮಲ್ಲಿ ಭಾವನಾತ್ಮಕ ಗ್ರೀಟಿಂಗ್ ಕಾರ್ಡುಗಳಿವೆಯೇ?
ಅಂಗಡಿಯಾತ: ಇದು ಹೇಗಿದೆ ನೋಡಿ; ಇದನ್ನು 'ನನ್ನ ಏಕ ಮಾತ್ರ ಒಲವಿಗೆ' ಎಂಬ ಒಕ್ಕಣಿಕೆಯೊಂದಿಗೆ ಆರಂಭಿಸಲಾಗಿದೆ.
ಹುಡುಗಿ: ತುಂಬಾ ಚೆನ್ನಾಗಿದೆ, ಅದರ 10 ಕಾರ್ಡುಗಳನ್ನು ಪ್ಯಾಕ್ ಮಾಡಿ!

★★★

## ಮುನ್ನೆಚ್ಚರಿಕೆ!

ವಿನಯಾ: ರೀ ಅಡುಗೆ ಮನೆಯಿಂದ ಸ್ವಲ್ಪ ಉಪ್ಪು ತಂದು ಕೊಡ್ತೀರಾ?
ಹರೀಶ: ಆದರೆ... ಉಪ್ಪು ಇಲ್ಲಿ ಸಿಗುತ್ತಿಲ್ಲವಲ್ಲಾ?
ವಿನಯಾ: ನಿಮಗೆ ಸಿಗುವುದಿಲ್ಲ ಎಂದು ನನಗೆ ಮೊದಲೇ ತಿಳಿದಿತ್ತು ಕಣ್ರೀ, ಆದ್ದರಿಂದ ನಾನದನ್ನು ಮುಂಚಿತವಾಗಿಯೇ ತಂದಿಟ್ಟುಕೊಂಡಿದ್ದೇನೆ!

**-ರಮಣ್ ಶೆಟ್ಟಿ, ರೆಂಜಾಳ್**


